<u>ಇಂದು ದಿನಾಂಕಃ **15.01.2021** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u> ಬೆಟ್ಟಾಚಾರಿಯವರು ಸಿದ್ಧಾಚಾರಿಯವರಿಂದ ದಿಃ **17-11-1940** ರಂದು ಹೌಸ್ ಲೀಸ್ಟ್ ನಂ **30** ರ **22X16** ಗಜ ವಿಸ್ತೀರ್ಣ ಇರುವ ನಿವೇಶನವನ್ನು ಖರೀದಿಸಿರುತ್ತಾರೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಕ್ರಯಪತ್ರದ ದೃಢೀಕೃತ ನಕಲನ್ನು ಸಾಕ್ಷಿಗೆ ಸೂಚಿಸಿ ತೋರಿಸಲಾಗಿದ್ದು ಸಾಕ್ಷಿಯು ಅದನ್ನು ಇರಬಹುದು ಎಂದು ಒಪ್ಪಿರುತ್ತಾರೆ. ಆದ್ದರಿಂದ ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ **7** ಎಂದು ಗುರುತಿಸಲಾಯಿತು. ಸಿದ್ಧಾಚಾರಿಯವರಿಗೆ ಮಾರಾಟ ಮಾಡುವ ಮೊದಲು ಹೌಸ್ ಲೀಸ್ಟ್ ನಂ **30** ರ ವಿಸ್ತೀರ್ಣ **44X16** ಗಜ ಇತ್ತು ಎಂದರೆ ಇರಬಹುದು. ಸದರಿ ವಿಸ್ತೀರ್ಣದ ಪೈಕಿ ಅರ್ಧ ವಿಸ್ತೀರ್ಣದ ನಿವೇಶನವನ್ನು ಸಿದ್ಧಾಚಾರಿಯವರು ನಿಪಿ **7** ರಂತೆ ಖರೀದಿಸಿರುತ್ತಾರೆ ಎಂದರೆ ಇರಬಹುದು. **1940-41** ನೇ ಸಾಲಿನಲ್ಲಿ ಶಾನುಭೋಗರು ಗ್ರಾಮದ ಜಮೀನು ಅಥವಾ ನಿವೇಶನಗಳ ದಾಖಲೆಗಳನ್ನು ಇಡುತ್ತಿದ್ದರು ಎಂದರೆ ಗೊತ್ತಿಲ್ಲ. ನಮ್ಮ ಗ್ರಾಮದಲ್ಲಿ ಶಾನುಭೋಗರು ಇದ್ದ ವಿಚಾರ ನನಗೆ ಗೊತ್ತಿಲ್ಲ. **44X16** ಗಜ ಎಂದರೆ **66X48** ಅಡಿ ಆಗುತ್ತದೆ ಎಂದರೆ ಸರಿ.

ಸಿದ್ಧಾಚಾರಿಯವರಿಗೆ ಇಬ್ಬರು ಹೆಂಡತಿಯರಿದ್ದು ಅವರ ಹೆಸರು ನಿಂಗಮ್ಮ ಮತ್ತು ಕಾಳಮ್ಮ ಎಂದರೆ ಸರಿ. ಕ್ರಯವಾದ ನಂತರ **30/1** ಬೆಟ್ಟಾಚಾರಿಯವರ ಹೆಸರಿಗೆ ಮತ್ತು **30/2** ಸಿದ್ಧಾಚಾರಿಯವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. ಸಿದ್ಧಾಚಾರಿಯವರು ತಮ್ಮ ಜೀವಿತಾವಧಿಯಲ್ಲಿಯೇ **66X48** ಅಡಿಯ ನಿವೇಶನವನ್ನು ಇಬ್ಬರು ಹೆಂಡತಿಯರ ಮಕ್ಕಳಿಗೆ ಸಮನಾಗಿ ಹಂಚಿಕೆ ಮಾಡಿದ್ದರು ಎಂದರೆ ಇರಬಹುದು, ಆದರೆ ಸಿದ್ಧಾಚಾರಿಯವರು ಅದೇ ಚೆಕ್ಕುಬಂದಿಯಲ್ಲಿ ಕೆಲವರಿಗೆ ಮಾರಾಟ ಮಾಡಿಕೊಂಡಿರುತ್ತಾರೆ. ಸಿದ್ಧಾಚಾರಿಯವರ ಎರಡನೇ ಹೆಂಡತಿಯ ಮಗ ಕೃಷ್ಣಾಚಾರಿಯವರ ಹೆಂಡತಿ ದಾಕ್ಷಾಯಿಣಿ ಅವರ ಗಂಡನ ಭಾಗಕ್ಕೆ ಬಂದ ಆಸ್ತಿಯನ್ನು ಅವರು ಮತ್ತು ಮಕ್ಕಳು ಹೌಸ್ ಲೀಸ್ಟ್ ನಂ. **30/2** ರ **14.63** ಮೀ X **3.65** ಮೀ ನಿವೇಶನವನ್ನು ಕೆ.ಹೆಚ್.ಪುಟ್ಟಣ್ಣಶೆಟ್ಟಿಯವರಿಗೆ ನಿಡಿ **1** ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ವಾದಿಗಳು ಮತ್ತು ಅವರ ಸಹೋದರರು ಸಿದ್ಧಾಚಾರಿಯವರ ಮೊದಲನೇ ಹೆಂಡತಿಯವರ ಮಕ್ಕಳು ಎಂದರೆ ಸರಿ. ಒಂದನೇ ಹೆಂಡತಿಯ ಮಕ್ಕಳಿಗೆ ಹೌಸ್ ಲೀಸ್ಟ್ **30/2** ರಲ್ಲಿ ಬಂದ ಆಸ್ತಿಯನ್ನು ವಾದಿ ಸಿ.ಎನ್.ಮೀನಾ ಕೋಂ ಭಾಸ್ಕರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯ ಜಂಜರ್ ನಂ. **33**, ಆಸ್ತಿ ನಂ. **30/2(ಬಿ)** ಆಗಿದ್ದು ಅದರ ವಿಸ್ತೀರ್ಣ **48X9** ಅಡಿ

ಆಗಿರುತ್ತದೆ ಎಂದರೆ ಸರಿ. ವಾದಿಯ ಉಳಿಕೆ ಸಹೋದರ ನರಸಿಂಹಚಾರಿ, ಯೋಗಾಚಾರಿ, ದಿನೇಶಚಾರಿ ಮತ್ತು ಸಹೋದರಿ ಪುಟ್ಟತಾಯಮ್ಮ ರವರು ಉಳಿಕೆ ಆಸ್ತಿಯನ್ನು ಮೀನಾರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯ ಜಂಜರ್ ನಂ. 33, ಆಸ್ತಿ ನಂ. 30/2(ಬಿ) ಆಗಿದ್ದು ಅದರ ವಿಸ್ತೀರ್ಣ 48×9 ಅಡಿ ಆಗಿರುತ್ತದೆ ಎಂದರೆ ಸರಿ. ಸಿದ್ದಾಚಾರಿಯವರ ಮಕ್ಕಳು ಹೌಸ್ ಲೀಸ್ಟ್ ನಂ 30/2 ರ ಆಸ್ತಿಯನ್ನೇ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ದಾವಾಚೆಕ್ಕುಬಂದಿಯಲ್ಲಿನ ನಿವೇಶನವನ್ನೇ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. ದಾವಾಚೆಕ್ಕುಬಂದಿಯಲ್ಲಿನ ಜಮೀನನ್ನೇ ಮಾರಾಟ ಮಾಡಿದ್ದಾರೆ ಎಂದು ಆಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ 6 ರಂತೆ ದಿನಾಂಕಃ 11-12-2017 ರಂದು ಇ-ಖಾತೆಯನ್ನು ಮಾಡಿಸಲಾಗಿದೆ ಎಂದರೆ ಸರಿ. ಸದರಿ ಖಾತೆಯನ್ನು ಮಾಡಿಸಿಕೊಳ್ಳುವ ಮೊದಲೇ 2014 ರಲ್ಲಿ ದಾವೆ ದಾಖಲಾಗಿತ್ತು ಎಂದರೆ ಸರಿ. ದಾವಾಸ್ತಿಗೆ ಸಂಬಂಧಿಸಿದಂತೆ ತಡೆಯಾಜ್ಞೆ ಇರುವ ಬಗ್ಗೆ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಯಾವ ಕಾರಣಕ್ಕಾಗಿ ಮನೆ ಕೆಲಸವನ್ನು ನಿಲ್ಲಿಸಲಾಗಿತ್ತು ಎಂದರೆ ಹಣಕಾಸಿನ ತೊಂದರೆಯಿಂದ ನಿಲ್ಲಿಸಿರುತ್ತೇವೆ. ನಾನು ಹೇಳುವಂತೆ ನಮಗೆ ಹಣಕಾಸಿನ ತೊಂದರೆ ಇರಲಿಲ್ಲ, ನ್ಯಾಯಾಲಯದ ತಡೆಯಾಜ್ಞೆಯ ಬಗ್ಗೆ ಗೊತ್ತಿತ್ತು, ಆದ್ದರಿಂದ ಪಂಚಾಯಿತಿಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಇ-ಖಾತೆಯನ್ನು ಮಾಡಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ 11 ರಂತೆ ದಿನಾಂಕಃ 14-01-2020 ರಂದು ಇ-ಖಾತೆಯನ್ನು ಮಾಡಿಸಲಾಗಿದೆ ಎಂದರೆ ಸರಿ. ದಾವಾಸ್ತಿಯನ್ನು ಹೊಡೆದುಕೊಳ್ಳುವ ಉದ್ದೇಶದಿಂದ ಇ-ಖಾತೆಯನ್ನು ಮಾಡಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ನ್ಯಾಯಾಲಯಕ್ಕೆ ನೀಡಿ ನ್ಯಾಯಾಲಯದ ಅಮೂಲ್ಯವಾದ ಸಮಯವನ್ನು ಹಾಳುಮಾಡುತ್ತಿದ್ದೇನೆ ಎದರೆ ಸರಿಯಲ್ಲ.

ಓ.ಎಸ್ 272/2009 ರ 8 ನೇ ಪ್ರತಿವಾದಿ ಯಾರು ಎಂದರೆ ಮರೆತಿರುತ್ತೇನೆ. ನಿಡಿ 8 ಅನ್ನು ನಾನೇ ಹಾಜರುಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಇರುವ ಒಕ್ಕಣೆಯನ್ನು ತಿಳಿದುಕೊಂಡಿದ್ದೇನೆ. ನಿಡಿ 8 ರ 8 ನೇ ಪ್ಯಾರಾದಲ್ಲಿರುವ ವಿಚಾರ ಗೊತ್ತೇ ಎಂದರೆ ಗೊತ್ತಿಲ್ಲ, ಆದರೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇವೆ. ಬಿ.ಎಂ.ಚೆಲುವಾಚಾರಿ ರವರು ಚೆನ್ನಾಚಾರಿಯವರ ಅಳಿಯ ಅಂದರೆ ವಾದಿಯ ಚಿಕ್ಕಪ್ಪ ಅಳಿಯ. ಚೆಲುವಾಚಾರಿಯ ತಂದೆಯ ಹೆಸರು ಏನು ಎಂದರೆ ಗೊತ್ತಿಲ್ಲ. ಹೌಸ್ ಲೀಸ್ಟ್ ನಂ 31/2 ಹಳೇ ನಂ 31 ಚೆನ್ನಾಚಾರಿಯವರಿಗೆ ಹೇಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ದಾವಾ ಸ್ವತ್ತು ಚೆನ್ನಾಚಾರಿಗೆ ಸಂಬಂಧ ಪಡದ ಸ್ವತ್ತು

ಎಂದರೆ ಸರಿಯಲ್ಲ. ಚೆನ್ನಾಚಾರಿಗೆ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಚೆನ್ನಾಚಾರಿಯವರಿಗೆ ಹೇಗೆ ಬಂದಿರುತ್ತದೆ ಎಂಬ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಚೆನ್ನಾಚಾರಿಯವರ ಹೆಸರಿಗೆ ಯಾವುದೇ ಆಸ್ತಿ ಇಲ್ಲದೇ ಇರುವುದರಿಂದ ಅವರಿಗೆ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರ ಎಂದರೆ ಮಾಡಿರುವುದಿಲ್ಲ. ಸಿದ್ದಾಚಾರಿ ವಾದಿಯ ತಂದೆ, ಭೈರಾಚಾರ, ಚೆನ್ನಾಚಾರಿ ಯವರ ನಡುವಿನ ವಿಭಾಗದ ಮುಖಾಂತರ ಚೆನ್ನಾಚಾರಿಯವರಿಗೆ ಆಸ್ತಿ ಬಂದಿದ್ದರಿಂದ ಅವರಿಗೆ ಮಾರಾಟ ಮಾಡುವ ಹಕ್ಕು ಇತ್ತು ಎಂದು ಹೇಳುತ್ತಾರೆ. ವಿಭಾಗಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರ ಎಂದರೆ ಮಾಡಿದ್ದೇನೆ. ಸಾಕ್ಷಿ ತಾನು ಹಾಜರು ಮಾಡಿರುವ ದಾಖಲೆಗಳನ್ನು ತೋರಿಸಿ ಅದು ಯಾವ ದಾಖಲೆ ಎಂದು ಸೂಚಿಸಿದಾಗ ನ್ಯಾಯಾಲಯದ ತೀರ್ಪನ್ನು ಹಾಜರು ಮಾಡಿದ್ದೇನೆ ಎಂದು ಹೇಳುತ್ತಾರೆ. ಚೆನ್ನಾಚಾರಿ ತನ್ನ ಅಳಿಯ ಚೆಲುವಾಚಾರಿಗೆ ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಯಾವುದೇ ದಾಖಲೆಯನ್ನು ಹಾಜರು ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಬಿ.ರಾಜೇಗೌಡ ಯಾರು ಎಂದರೆ ಅವರು ನನ್ನ ಸಂಬಂಧಿಯಲ್ಲ. ಆದರೆ ಅವರು ನಮ್ಮ ನಿವೇಶನದ ಪಕ್ಕ ಇದ್ದಿದ್ದರಿಂದ ಅವರು ಪರಿಚಯವಿರುತ್ತಾರೆ. ಸದರಿಯವರಿಗೆ ಕ್ರಯಪತ್ರದ ಮೂಲಕ ಸ್ವತ್ತು ಬಂದಿರುತ್ತದೆ ಸದರಿಯವರು ಕೃಷ್ಣಮೂರ್ತಿ ಮತ್ತು ಪದ್ಮಾರವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ಕೃಷ್ಣಮೂರ್ತಿ ಮತ್ತು ಪದ್ಮಾರವರು ಯಾರಿಂದ ಖರೀದಿಸಿದ್ದರು ಎಂದರೆ ಚೆಲುವಾಚಾರಿಯವರಿಂದ ಖರೀದಿಸಿದ್ದರು. ಚೆಲುವಾಚಾರಿಯವರು ಚೆನ್ನಾಚಾರಿಯವರಿಂದ ಖರೀದಿಸಿರುತ್ತಾರೆ. ನಾನು ಈಗ ಮೇಲೆ ಹೇಳಿದ ಕ್ರಯಗಳಿಗೆ ಸಂಬಂಧಿಸಿದಂತೆ ಯಾವ ದಾಖಲೆಗಳನ್ನು ನ್ಯಾಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ತಾವು ಸಲ್ಲಿಸಿರುವ ದಾಖಲೆಗಳಲ್ಲಿ ಸದರಿ ದಾಖಲೆಗಳನ್ನು ಗುರುತಿಸುವಂತೆ ಸೂಚಿಸಿದಾಗ ಸಾಕ್ಷಿಯು ನಿಡಿ 28 ಮತ್ತು 38 ಎಂದು ಹೇಳುತ್ತಾರೆ. ಮುಂದುವರಿದ ಸಾಕ್ಷಿಯು ಪ್ರಸ್ತುತ ಯಾರ ಹೆಸರಿನಲ್ಲಿರುತ್ತದೆಯೋ ಅವರ ದಾಖಲೆಯನ್ನು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.